4. ಸಂಜೆ 6:00 ಗಂಟೆಯ ನಂತರ ಗಿರಿಧಾಮಕ್ಕೆ ಪ್ರವಾಸಿಗರ ಪ್ರವೇಶವನ್ನು ನಿರ್ಭಂಧಿಸಲಾಗಿದೆ.

5. ಗಿರಿಧಾಮದಲ್ಲಿ ಎಲೆಕ್ಟ್ರಾನಿಕ್ ಸೈರನ್ ಅಳವಡಿಸಲಾಗಿದ್ದು, ಸಂಜೆ 6:00 ಗಂಟೆಗೆ ಸೈರನ್ ಮುಖಾಂತರ ಪ್ರವಾಸಿಗರಿಗೆ ಹೊರಡಲು ಸೂಚನೆಯನ್ನು ನೀಡಲಾಗುತ್ತದೆ.

6. ಗಿರಿಧಾಮಕ್ಕೆ ಆಗಮಿಸುವ ಪ್ರವಾಸಿಗರ ಸುರಕ್ಷತೆಗಾಗಿ ಅತಿಥಿ ಗೃಹದ ಸುತ್ತಲೂ ಸಿ.ಸಿ.ಟಿ.ವಿ ಗಳನ್ನು ಅಳವಡಿಸಲಾಗಿದೆ.

ಅಪೆಕ್ಸ್ ಬ್ಯಾಂಕ್ ಸಾಲವಸೂಲಿ

266(579); ಶ್ರೀ ಕೆ. ಗೋಪಾಲಯ್ಯ (ಮಹಾಲಕ್ಷ್ಮೀ ಲೇಔಟ್)

ಅ) ಕರ್ನಾಟಕ ರಾಜ್ಯ ಕೋ–ಆಪರೇಟಿವ್ ಅಪೆಕ್ಸ್ ಬ್ಯಾಂಕ್ ಎಲ್ಲೆಲ್ಲಿ ಕಾರ್ಯ ನಿರ್ವಹಿಸುತ್ತಿವೆ;

ಆ) ಕೇಂದ್ರ ಕಛೇರಿ ಹಾಗೂ ವಿವಿಧ ಶಾಲೆಗಳು ಇಲ್ಲಿಯವರೆಗೆ ನೀಡಿರುವ ಸಾಲವೆಷ್ಟು?

ಇ) ಸಾಲದ ವಸೂಲಾತಿ ಹಾಗೂ ವಸೂಲಾಗದೇ ಇರುವ ಸಾಲವೆಷ್ಟು;

ಈ) ಸರಿಯಾದ ಶ್ಯೂರಿಟಿ ಹಾಗೂ ಸ್ಥಳ ಪರಿವೀಕ್ಷಣೆ ಇಲ್ಲದೆ ಸಾಲಗಳನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಸಹಕಾರ ಸಚಿವರು)

ಅ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ನಗರದಲ್ಲಿ ಕೇಂದ್ರ ಕಛೇರಿ ಹಾಗೂ 42 ಶಾಖೆಗಳ ಮೂಲಕ ಕಾರ್ಯನಿರ್ವಹಿಸುತ್ತಿದೆ.

ಆ) ದಿನಾಂಕ:31.03.2014 ರವರೆಗೆ ಕೇಂದ್ರ ಕಛೇರಿಯಿಂದ ` 7057.72 ಕೋಟಿಗಳು ಹಾಗೂ 42 ಶಾಖೆಗಳ ಮೂಲಕ ` 1047.30 ಕೋಟಿಗಳ ಸಾಲ ನೀಡಿದ್ದು ಒಟ್ಟು ` 8105.02 ಕೋಟಿಗಳ ಸಾಲ ನೀಡಲಾಗಿದೆ.

ಇ) ದಿನಾಂಕ:31.03.2014 ಕ್ಕೆ ಇದ್ದಂತೆ ವಸೂಲಾತಿಯಾದ ಹಾಗೂ ವಸೂಲಾತಿಗೆ ಬಾಕಿ ಇರುವ ಸಾಲದ ವಿವರ ಕೆಳಕಂಡಂತಿದೆ:

(` **ಕೋಟಿಗಳಲ್ಲಿ**)

ವಿವರ	**ಮೊತ್ತ**
ತಗಾದೆ	3882.99
ವಸೂಲಾತಿಯಾದ ಮೊತ್ತ	3799.02
ವಸೂಲಾತಿಗೆ ಬಾಕಿ ಇರುವ ಮೊತ್ತ	83.97
ಶೇಕಡವಾರು ವಸೂಲಾತಿ	ಶೇ. 98 ರಷ್ಟು

ಈ) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು ಇವರು ಸರಿಯಾದ ಶ್ಯೂರಿಟಿ ಹಾಗೂ ಸ್ಥಳ ಪರಿವೀಕ್ಷಣೆ ಇಲ್ಲದೇ ಸಾಲಗಳನ್ನು ನೀಡಿರುವುದಿಲ್ಲ. ಎಲ್ಲಾ ಸಾಲಗಳನ್ನು ಸೂಕ್ತ ಭದ್ರತೆ ಪಡೆದು ನೀಡಲಾಗಿದೆ ಎಂದು ತಿಳಿಸಿರುತ್ತಾರೆ.

ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿಗೆ ಸಂಬಂಧಿಸಿದಂತೆ, ಸ್ಥಳ ಪರಿವೀಕ್ಷಣೆ ಮತ್ತು ಸರಿಯಾದ ಭದ್ರತೆ ಪಡೆಯದೆ ಸಾಲ ವಿತರಿಸಿದ ಬಗ್ಗೆ ಕೆಲವು ದೂರುಗಳು ಸ್ವೀಕೃತಗೊಂಡಿದ್ದು, ಅವುಗಳ ವಿಚಾರಣೆ ನಡೆಸಲಾಗುತ್ತಿದೆ.